
ವಿರಾಟ್ ಕೊಹ್ಲಿ


ರಫಾಲ್ ನಡಾಲ್

GENERATION Y

ಮೇಲೆ 'ಎಕ್ಸ್' ತಲೆಮಾರಿಗೆ ಈಗಿನ ವ್ಯಾಖ್ಯಾನ ಸಿಕ್ಕಿತಷ್ಟೆ. 'ವೈ' ಜನರೇಷನ್ ಕುರಿತು ಅವರ ಹಿರಿಯರಾದ 'ಎಕ್ಸ್' ಜನರಿಗೆ ಮೊದಲಿನಿಂದಲೂ ತಕರಾರು. ಅವರ ರೀತಿ–ರಿವಾಜು, ಬದುಕುವ ಕ್ರಮ, ಚೆಲ್ಲಾಪಿಲ್ಲಿ ಚಿಂತನೆಗಳು, ಬಹು ಚಟುವಟಿಕೆಯ ಬಗೆಗೆ ಟೀಕೆಗಳು ಸಾಮಾನ್ಯ. ವ್ಯಂಗ್ಯವೆಂದರೆ, ಇಂಥ ಟೀಕೆಗಳು ಏನೇ ಇದ್ದರೂ ಇದೇ 'ಎಕ್ಸ್' ಜನರೇಷನ್‌ನ ಉದ್ಯಮಪತಿಗಳು ಉಳಿದೆರಡು ತಲೆಮಾರುಗಳ ಪಡ್ಡೆಗಳಿಗೇ ಗಾಳ ಹಾಕಬೇಕಿದೆ.

ವಿರಾಟ್ ಕೊಹ್ಲಿಗಿಂತ ಹದಿನೈದು ವರ್ಷ ಮುಂಚೆ ಹುಟ್ಟಿ, ಆತನಿಗೆ ಒಂದು ವರ್ಷ ತುಂಬಿದ್ದ ಹೊತ್ತಿಗೆ ಮೊದಲ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್ ಪಂದ್ಯ ಆಡಿದ ಸಚಿನ್ ತೆಂಡೂಲ್ಕರ್ ಗೊತ್ತಲ್ಲವೇ? ಇದೇ ಕೊಹ್ಲಿ ತಾವು ಆರಾಧಿಸಿದ ಕ್ರಿಕೆಟಿಗನನ್ನು ವಿಶ್ವಕಪ್ ಗೆದ್ದಾಗ ಭುಜದ ಮೇಲೆ ಕೂರಿಸಿಕೊಂಡು ಮೆರೆಸಿದ್ದನ್ನು ಮರೆಯಲಾದೀತೆ. ಸಚಿನ್ ಕೂಡ ಕಪಿಲ್ ದೇವ್ ಬೌಲಿಂಗ್‌ನಲ್ಲಿ ಮೊದಲ ಸಲ ನೆಟ್ಸ್‌ನಲ್ಲಿ ಆಡಿದಾಗ ಪುಲಕಗೊಂಡಿದ್ದವರು. 'ಎಕ್ಸ್', 'ವೈ' ಎರಡೂ ಜನರೇಷನ್‌ಗಳು ಹೇಗೆ ಕ್ರಿಕೆಟ್ ಚರಿತ್ರೆಯ ಪ್ರಭಾವಳಿಯಲ್ಲಿ ಕಣ್ಣುಕೋರೈಸಿದ್ದವು ಎನ್ನುವುದಕ್ಕೆ ಇದೊಂದು ದೃಷ್ಟಾಂತ.

ಸ್ವಿಟ್ಜರ್‌ಲೆಂಡ್‌ನ ರೋಜರ್ ಫೆಡರರ್‌ಗೂ ಗ್ರೀಸ್‌ನ ಸ್ಟೆಫನೋಸ್ ಸಿಸಿಪಸ್‌ಗೂ ಹದಿನೇಳು ವರ್ಷ ವಯಸ್ಸಿನ ಅಂತರ. ಮೊನ್ನೆ ಮೊನ್ನೆ ಇಬ್ಬರೂ ಆಸ್ಟ್ರೇಲಿಯಾ ಓಪನ್‌ನ ನಾಲ್ಕನೇ ಸುತ್ತಿನಲ್ಲಿ ಆಡತೊಡಗಿದಾಗ 'ಅತಿ ಹಿರಿಯ ವರ್ಸಸ್' ಅತಿ ಕಿರಿಯ ಸೆಣೆಸಿದಂತಾಯಿತು. ಮೂರನೇ ಗ್ರ್ಯಾನ್ ಸ್ಲ್ಯಾಮ್ ಟೆನಿಸ್ ಪ್ರಶಸ್ತಿ ಗೆಲ್ಲುವ ಕನಸನ್ನು ಕಣ್ಣಲ್ಲಿ ಮಡಚಿಟ್ಟುಕೊಂಡು ಬಂದಿದ್ದ ಫೆಡರರ್, ಹೊಸ ಹುಡುಗನ ಎದುರು ಮಂಡಿಯೂರಿದರು. 'ಭಲೇ...ಈ ರಾತ್ರಿ ನೀನು ಹಸನಾಗಿ ಆಡಿದೆ' ಎಂದು ಬೆನ್ನುತಟ್ಟಿ ತಣ್ಣಗೆ ಹೋದರು. ಸ್ಟೆಫನೋಸ್ ಬರೀ ಟೆನಿಸ್ ಆಡುವುದಿಲ್ಲ. ಅವನಿಗೆ ಅಡುಗೆ ಮಾಡಲು ಗೊತ್ತು. ಪ್ರವಾಸ ಹವ್ಯಾಸ. ಕೈಯಲ್ಲಿ ಸದಾ ಪುಟಾಣಿ ವಿಡಿಯೊ ಕ್ಯಾಮೆರಾ ಇರುತ್ತದೆ. ಜನಕಥನಗಳನ್ನು ಚಿತ್ರೀಕರಿಸಿ ತನ್ನದೇ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡುವ ಹುರುಪಿನ ಹುಡುಗ. ಅಲ್ಲಿ ಎಷ್ಟು ಜನ ಇಷ್ಟಪಟ್ಟರು, ಎಂತೆಂಥ ಕಮೆಂಟ್‌ಗಳು ಬಂದವು ಎನ್ನುವುದರ ಉಸಾಬರಿಯೂ ಅವನಿಗೆ. ಅಷ್ಟೇ ಏಕೆ, ಟೆನಿಸ್ ಅಂಕಣದಲ್ಲಿ ನಿಂತೇ 'ನನ್ನ ಯೂಟ್ಯೂಬ್ ಚಾನೆಲ್‌ಗೆ ಯಾರು ಯಾರು ಸಬ್‌ಸ್ಕ್ರೈಬ್ ಆಗಿಲ್ಲವೋ ಬೇಗ ಆಗಿ' ಎಂದು ಕೋರಿ ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡ. ಫೆಡರರ್ ಇನ್ನೊಂದು ವರ್ಷ ತಡವಾಗಿ ಹುಟ್ಟಿದ್ದಿದ್ದರೆ ಅವರೂ ಮಿಲೇನಿಯಲ್‌ಗಳ ಪಟ್ಟಿ ಸೇರುತ್ತಿದ್ದರು. 'ಎಕ್ಸ್', 'ವೈ' ಎರಡೂ ಜನರೇಷನ್‌ಗಳು ಹೇಗೆ ಟೆನಿಸ್ ಚರಿತ್ರೆಯ ಪ್ರಭಾವಳಿಯಲ್ಲಿ ಮನಗೆದ್ದವು ಎನ್ನುವುದಕ್ಕೆ ಇದು ಇನ್ನೊಂದು ದೃಷ್ಟಾಂತ.

### ನಮ್ಮ ಕಾಲದಲ್ಲಿ ಹಾಗಿತ್ತು... ನಿಮ್ಮ ಕಾಲ ನೋಡಿ...

ಹಿರಿಯರು, ಮೇಲಧಿಕಾರಿಗಳು ಹೀಗೆ ನಾಸ್ಟಾಲ್ಜಿಕ್ ಆಗಿ ಹೇಳುವುದನ್ನು ತಲೆಮಾರುಗಳು ಕೇಳಿಕೊಂಡೇ ಬಂದಿವೆ. ಆದರೆ, ಮಿಲೇನಿಯಲ್‌ಗಳು ಇಂಥ ಮಾತುಗಳನ್ನು ಶಾಂತಚಿತ್ತದಿಂದ ಕೇಳುವುದು ಕಡಿಮೆ. ನಡುವೆಯೇ ಬಾಯಿ ಹಾಕುತ್ತಾರೆ. ಪ್ರಶ್ನಿಸುತ್ತಾರೆ. ಕೆಣಕುತ್ತಾರೆ. ಅದು ಹಿರಿಯರಿಗೆ ಕಿರಿಕಿರಿ. ನಮ್ಮ ದೇಶದ ಮಟ್ಟಿಗೆ ಅರ್ಥಂಬರ್ಥ ಕೇಳಿಸಿಕೊಂಡು, ಗೋಣು ಆಡಿಸುತ್ತಾ ನಟಿಸುವವರನ್ನು ಹೆಚ್ಚಾಗಿ ಕಾಣಬಹುದು.

ಇನ್ನು ಕೆಲವರು ತಮ್ಮಷ್ಟಕ್ಕೆ ತಾವು ಮೊಬೈಲ್ ಫೋನ್‌ನಲ್ಲಿ ಮೆಸೇಜ್ ಮಾಡುತ್ತಾ ಕೂರುತ್ತಾರೆ. ಸೈದ್ಧಾಂತಿಕ ಕೊರತೆದಿಂದ ಮುಕ್ತಿಮಾರ್ಗದಂತೆ ಅದು ಅವರಿಗೆ ಕಾಣಬಹುದೋ ಏನೋ? ನೆಂಟಿಕೆಗೆ 'ಫೇಸ್‌ಬುಕ್' ಕೂಡ ಇದೆ. ಮಿಲೇನಿಯಲ್‌ಗಳ ಮನಸ್ಥಿತಿ ದೇಶದಿಂದ ದೇಶಕ್ಕೆ ಭಿನ್ನವಾಗಿದ್ದರೂ ಹಳಹಳಿಕೆಯ ವಿಷಯದಲ್ಲಿ ಎಲ್ಲೆಡೆಯೂ ಸಮಾನತೆ ಇದೆ.